

## 5 ಅಡಿ ಉದ್ದದ 'ಹೆಗ್ಗಹಳೆ'

ಇದು ಸುಮಾರು 5 ಅಡಿ ಉದ್ದ ಇರುವ, ಹಿತ್ತಾಳೆ ಲೋಹದಿಂದ ತಯಾರಿಸಿದ ಊದುವ ಸಾಧನ. ಇದನ್ನು ಕರಾವಳಿ ಭಾಗದಲ್ಲಿ 'ಹೆಗ್ಗಹಳೆ' ಎಂದು ಕರೆಯುತ್ತಾರೆ. ಹಿರಿದಾದ ಕಹಳೆಯಾದ್ದರಿಂದ ಇದಕ್ಕೆ 'ಹೆಗ್ಗಹಳೆ' ಎಂಬ ಹೆಸರು ಬಂದಿದೆ. ಇದನ್ನು ಉಡುಪಿಯ ಶ್ರೀಕೃಷ್ಣ ಮಠದ ಪೂಜೆ, ಉತ್ಸವ, ರಥೋತ್ಸವಗಳು ನಡೆಯುವ ಸಂದರ್ಭಗಳಲ್ಲಿ ಬಳಸಲಾಗುತ್ತದೆ. ಈ ಕಹಳೆಯನ್ನು ಊದಬೇಕಾದರೆ ವಿಶೇಷ ಸಂಗೀತ ಜ್ಞಾನ, ಪರಿಣತಿ ಬೇಕು. ಕಳೆದ 32 ವರ್ಷಗಳಿಂದ ಶ್ರೀಕೃಷ್ಣ ಮಠದ ಪೂಜೆ ಉತ್ಸವಾದಿಗಳಲ್ಲಿ ನಗಾರಿ ವಾದನ ನಿರ್ವಹಿಸುವ ಸದಾಶಿವ ದೇವಾಡಿಗ ಅವರು ಇದನ್ನು ಊದುತ್ತಿದ್ದಾರೆ. ಮಠಕ್ಕೆ ಹೋದ ಸಂದರ್ಭ, ಅಲ್ಲಿಯ ರಥಬೀದಿಯಲ್ಲಿ ಇರುವ ನಗಾರಿ ಕೊಣೆಗೆ ಭೇಟಿ ನೀಡಿದಾಗ, ಸದಾಶಿವ ದೇವಾಡಿಗ ಅವರು ಇದರ ಬಗ್ಗೆ ಮಾಹಿತಿ ನೀಡಿದರು.

—ತಾರಾನಾಥ್ ಮೇಸ್ತ ಶಿರೂರು, ಉಡುಪಿ

## ಎಲ್ಲೆಲ್ಲೂ ಅಣಬೆಗಳು!

ಈ ಅಣಬೆಗಳು ಕಂಡುಬಂದದ್ದು ಹುತ್ತವೊಂದರ ಮೇಲೆ. ತುದಿಯಲ್ಲಿ ಟೊಪ್ಪಿಗೆಯಂಥ ರಚನೆ ಇರುವುದರಿಂದ ಇವುಗಳನ್ನು ನಾಯಿಕೊಡೆಗಳು ಎನ್ನುತ್ತಾರೆ. ಇವು ಅಗ್ಯಾರಿಕೇಲ್ಸ್ ವರ್ಗಕ್ಕೆ ಸೇರಿದ್ದು, ಇದರಲ್ಲಿ 125 ಜಾತಿಗಳು ಮತ್ತು 4,000 ಪ್ರಭೇದಗಳಿವೆ. ಈ ಅಣಬೆಗಳು ಶಿಲೀಂದ್ರಗಳಾಗಿದ್ದು, ಕೊಳೆತ ಸಾವಯವ ವಸ್ತುಗಳ ಮೇಲೆ ಬೆಳೆಯುತ್ತವೆ. ಇವು ತಮ್ಮ ಆಹಾರವನ್ನು ಸ್ವತಃ ತಯಾರಿಸಿಕೊಳ್ಳಲು ಸಾಧ್ಯವಿಲ್ಲ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು.





## ತ್ರಿವಳಿ ಬದನೆಕಾಯಿ

ಪ್ರಕೃತಿಯು ಅಚ್ಚರಿಗೊಳಿಸುವಂತಹ ಅಂಶಗಳನ್ನು ತನ್ನೊಳಗಿಟ್ಟುಕೊಂಡಿದೆ. ಕೃಷಿ ಉತ್ಪನ್ನಗಳು ಇದಕ್ಕೆ ಹೊರತಾಗಿಲ್ಲ. ರೈತರ ತೋಟಗಳಲ್ಲಿ ಹಾಗೂ ಮನೆಗಳ ಹಿತ್ತಲ ಕೈತೋಟಗಳಲ್ಲಿ ಬೆಳೆಯುವ ಬೆಳೆಯಿಂದ ದೇವರು, ಪ್ರಾಣಿಗಳು ಸೇರಿದಂತೆ ನಾನಾ ರೀತಿಯ ಆಕಾರದ ತರಕಾರಿಗಳು ಬೆಳೆಯುತ್ತವೆ. ಇವು ನಮ್ಮನ್ನು ಅಚ್ಚರಿಗೊಳಿಸುತ್ತಲೇ ಇರುತ್ತವೆ. ಈ ಚಿತ್ರದಲ್ಲಿ ಕಾಣುತ್ತಿರುವ ಬದನೆಕಾಯಿ ದಕ್ಷಿಣ ಕನ್ನಡ ಜಿಲ್ಲೆಯ ಶಿಶಿಲ ಸಮೀಪದ ನಿವಾಸಿ ಶೈಲಾ ನಾರಾಯಣ ಭಟ್ ಕಾಂತಿಲ ಅವರ ಹಿತ್ತಲ ಕೈತೋಟದಲ್ಲಿ ಬೆಳೆದವು. ಮನೆಗಂತಲೆ ಬೆಳೆದ ಈ ಗಿಡದಲ್ಲಿ ಅವಳಿ ಹಾಗೂ ತ್ರಿವಳಿ ಬದನೆಕಾಯಿಗಳು ಬೆಳೆದು ಆಕರ್ಷಿಸಿವೆ.

ಸೀಮಾ ಪೋನಡ್ಕ, ದಕ್ಷಿಣ ಕನ್ನಡಜಿಲ್ಲೆ

**ನಿಮ್ಮ ನುಡಿಚಿತ್ರಕ್ಕೆ ಇಲ್ಲಿದೆ ವೇದಿಕೆ**

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.
ಇಮೇಲ್ ವಿಳಾಸ: editorsu@sudha.co.in